ಕಡೆ ನಡೆದರು. ಜನಜಂಗುಳಿಯಲ್ಲಿ ಕೈತಪ್ಪಿ ಹಿಂದುಳಿದ ಆ ಪುಟ್ಟ ಹುಡುಗ ಎಲ್ಲಿ ಎಂದು ನರೇಂದ್ರ ನಿಂತು ಸುತ್ತ ನೋಡಿದ. ಎಲ್ಲೂ ಕಾಣಲಿಲ್ಲ. ಅಷ್ಟರಲ್ಲಿ ವೇಗವಾಗಿ ಬರುತ್ತಿದ್ದ ಸಾರೋಟಿನ ಸದ್ದಿಗೆ ಜನ ಸರಿದು ದಾರಿ ಬಿಟ್ಟಾಗ, ಈ ಪುಟ್ಟ ಹುಡುಗ ಗಾಬರಿಯಾಗಿ ಗರ ಬಡಿದಂತೆ ರಸ್ತೆಯ ಮಧ್ಯೆ ನಿಂತಿದ್ದುದು ಕಂಡಿತು. ಸಾರೋಟು ಇನ್ನೇನು ಹುಡುಗನ ಮೇಲೆ ಹಾಯ್ದುಹೋಗಬೇಕು, ನರೇಂದ್ರ ಮಿಂಚಿನ ವೇಗದಲ್ಲಿ ಮುನ್ನುಗ್ಗಿ ಓಡಿ, ಅವನನ್ನು ಪಕ್ಕಕ್ಕೆ ಎಳೆದುಕೊಂಡ. ಆ ಹುಡುಗರಲ್ಲಿ ನರೇಂದ್ರನೇ ಚಿಕ್ಕವನು. ಆದರೆ ಅವನ ಸಾಹಸವನ್ನು ನೋಡಿ ಸುತ್ತಲಿನ ಜನ ಬೆರಗಾದರು. ಆಗಬಹುದಾಗಿದ್ದ ಅನಾಹುತವನ್ನು ಗಮನಿಸಿದರೂ ಸಹಾಯಕ್ಕೆ ಮುನ್ನುಗ್ಗಿ ಮಗುವನ್ನು ಅಪಾಯದಿಂದ ಪಾರುಮಾಡುವ ವಿಚಾರವೇ ಬೇರೆಯವರಿಗೆ ಹೊಳೆಯಲಿಲ್ಲ. ಎಲ್ಲರೂ ನರೇಂದ್ರನ ಸಮಯ ಸ್ಫೂರ್ತಿ, ಧೈರ್ಯ, ಸಹಾಯ ಮಾಡುವ ಬುದ್ಧಿಗಳನ್ನು ಹೊಗಳಿದರು. ಇದಾವುದಕ್ಕೂ ಗಮನಕೊಡದೆ ನರೇಂದ್ರ ಆ ಬಾಲಬಂಧುವಿನೊಡನೆ ಮನೆಗೆ ಬಂದು ತಾಯಿಗೆ ನಡೆದ ವಿಷಯ ಹೇಳಿದ. ಆಕೆಗೆ ಮಗನ ಬಗ್ಗೆ ಹೆಮ್ಮೆಯೆನಿಸಿತು. ಅದನ್ನು ವ್ಯಕ್ತಪಡಿಸಿ, "ಮಗೂ ನರೇಂದ್ರ, ನೀನು ಯಾವಾಗಲೂ ಹೀಗೆ ಇರು" ಎಂದು ಆಶೀರ್ವದಿಸಿದಳು. ತನಗಾಗಬಹುದಾದ ಅಪಾಯವನ್ನೂ ಲಕ್ಷಿಸದೆ, ಇತರರ ರಕ್ಷಣೆಗೆ ಮುಂದಾಗಲು ತ್ಯಾಗಬುದ್ಧಿ ಅಗತ್ಯ. ಯೋಚಿಸಿ ಲೆಕ್ಕಾಚಾರ ಹಾಕಿ ಮಾಡುವ ಕಾರ್ಯವಲ್ಲ ಇದು. ಆದರ್ಶಪ್ರಾಯವಾದ ಸೇವೆ ಎಂದರೆ ಇದು.

ಪರಿವ್ರಾಜಕರಾಗಿ ಅಖಂಡ ಭಾರತವನ್ನು ಪರ್ಯಟನ ಮಾಡುತ್ತಿರುವಾಗ ತಮ್ಮ ತಾಯ್ನಾಡಿನ ಲಕ್ಷಾಂತರ ಸಾಮಾನ್ಯ ಜನರ ದಟ್ಟ ದಾರಿದ್ರ್ಯ, ಅಜ್ಞಾನ, ಮೂರ್ಖ ನಿಷ್ಕ್ರಿಯತೆ, ಹೆಣ್ಣುಮಕ್ಕಳ ದಾರುಣ ಸ್ಥಿತಿ, ದೈನ್ಯತೆ – ಇವೆಲ್ಲವನ್ನೂ ಕಣ್ಣಾರೆ ಕಂಡು ಸ್ವಾಮೀಜಿಗೆ ತಡೆಯಲಾರದಷ್ಟು ದುಃಖವಾಯಿತು. ಕನ್ಯಾಕುಮಾರಿಯ ಸಮುದ್ರದ ಮಧ್ಯೆ ಇರುವ ಬಂಡೆಯ ಮೇಲೆ ಕುಳಿತು, ಸಮಗ್ರಭಾರತದ ದುಃಸ್ಥಿತಿಯನ್ನು ಮನಸ್ಸಿಗೆ ತಂದುಕೊಂಡು ಅವರು ಕಣ್ಣೀರುಗರೆಯುತ್ತಾರೆ. ಅದೆಷ್ಟೋ ರಾತ್ರಿಗಳ ಕಾಲ ನಿದ್ರೆಯಿಲ್ಲದೆ ತಮ್ಮ ಜನರಿಗಾಗಿ ದುಃಖಿಸುತ್ತಾರೆ. ಆಗ ಅವರ ಮನದಲ್ಲಿ ಮೂಡಿದ ಪರಿಕಲ್ಪನೆಗಳೇ 'ದರಿದ್ರದೇವೋ ಭವ', 'ಮೂರ್ಖದೇವೋ ಭವ' ಮುಂತಾದವು. ಗುರುಬಂಧುಗಳನ್ನೆಲ್ಲ ಜೊತೆಗೂಡಿಸಿಕೊಂಡು ರಾಮಕೃಷ್ಣ ಮಠವನ್ನು ರೂಪಿಸಿದಾಗ **'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'** – 'ತನ್ನ ಮೋಕ್ಷ ಮತ್ತು ಜಗತ್ತಿನ ಹಿತ' ಎಂಬ ಅವರ ಧ್ಯೇಯ ವಾಕ್ಯವೇ ಮುಂದಿನ ಕಾರ್ಯಯೋಜನೆಯ ದೀಕ್ಷಾಮಂತ್ರವಾಯಿತು. ಸ್ವಾಮೀಜಿಯ ದೃಷ್ಟಿಯಲ್ಲಿ ಭಗವತ್ಸಾಕ್ಷಾತ್ಕಾರಕ್ಕಾಗಿ ವೈಯಕ್ತಿಕ ಸಾಧನೆ ಎಂಬುದು ಮುಖ್ಯವಾಗಿರುವಂತೆ, ಅಷ್ಟೇ ಮುಖ್ಯವಾದುದು ಜೀವನಲ್ಲಿ ಶಿವನನ್ನು ಕಂಡು ಮಾಡುವ ಸೇವೆ, ಜಗತ್ತಿನ ಹಿತಸಾಧನೆ. ತಮ್ಮ ಇಡೀ ಜೀವನದಲ್ಲಿ ಈ ಧ್ಯೇಯವನ್ನು ಅವರು ಸ್ವತಃ ಸಾಧಿಸಿ ತೋರಿಸಿದ್ದಾರೆ.

ಅಮೆರಿಕೆಯ ಶಿಕಾಗೊ ನಗರದಲ್ಲಿ ಏರ್ಪಾಟಾಗಿದ್ದ ವಿಶ್ವಧರ್ಮ ಸಮ್ಮೇಳನದಲ್ಲಿ ಭಾರತದ (ಹಿಂದೂಧರ್ಮದ) ಅನಧಿಕೃತ ಪ್ರತಿನಿಧಿಯಾಗಿ, ಒಬ್ಬ ಅನಾಮಿಕ ಸಂನ್ಯಾಸಿಯಾಗಿ, ಜಗತ್ತಿನ ನಾನಾ ಕಡೆಗಳಿಂದ ಬಂದ ವಿವಿಧ ಧರ್ಮಗಳ ಪ್ರಚಂಡ ಮೇಧಾವಿಗಳೂ, ವಾಗ್ಮಿಗಳೂ ಆದಂಥವರು ಮಾತನಾಡಿದ ವೇದಿಕೆಯಿಂದ, ಕೊನೆಯ ಉಪನ್ಯಾಸಕರಾಗಿ ಕೇವಲ ಕೆಲವೇ ನಿಮಿಷಗಳಲ್ಲಿ ಭಾರತದ ಅಧ್ಯಾತ್ಮ ಸಿದ್ಧಿಯನ್ನೂ, ಹಿಂದೂ ಸಮನ್ವಯ ದೃಷ್ಟಿಯನ್ನೂ ಇಡೀ ವಿಶ್ವಕ್ಕೆ ಮನವರಿಕೆ ಮಾಡಿಕೊಟ್ಟದ್ದು, ದಾಸ್ಯ ದೈನ್ಯತೆಗಳಲ್ಲಿ ಸಿಕ್ಕು ಕಳಾಹೀನವಾಗಿದ್ದ ಭಾರತವು ಮತ್ತೆ ಹೆಮ್ಮೆಯಿಂದ ತಲೆಯೆತ್ತಿ ನಿಲ್ಲುವಂತೆ, ಪಾಶ್ಚಾತ್ಯರ ಗೌರವಕ್ಕೆ ಪಾತ್ರವಾಗುವಂತೆ ಮಾಡಿದುದೂ ಸಾಮಾನ್ಯ ಸಂಗತಿಯಲ್ಲ. ಇದು ಸ್ವಾಮೀಜಿ ತಮ್ಮ ತಾಯ್ನಾಡಿಗೆ ಮಾಡಿದ ಅಪೂರ್ವವೂ ಅದ್ಭುತವೂ ಆದ ಸೇವೆ!

ಈ ಸೇವೆಯ ದಾರಿಯೂ ಸುಗಮವಾದುದಾಗಿರಲಿಲ್ಲ. ಸ್ವಾಮೀಜಿ ವಿಶ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಲು ಸಾಧ್ಯವೇ ಇಲ್ಲ ಎಂಬ ಪರಿಸ್ಥಿತಿಯ ಜೊತೆಗೆ ತೀವ್ರ ಆರ್ಥಿಕ ಮುಗ್ಗಟ್ಟು ಕೂಡ ಕೂಡಿಕೊಂಡಿತ್ತು. ಆಗ ಶ್ರೀರಾಮಕೃಷ್ಣರ ಕೃಪೆಯೇ ಹಾರ್ವರ್ಡ್ ವಿಶ್ವವಿದ್ಯಾನಿಲಯದ ಗ್ರೀಕ್ ಸಾಹಿತ್ಯ ಪ್ರಾಧ್ಯಾಪಕ ಡಾ. ಜಾನ್ ಹೆನ್ರಿ ರೈಟ್ ಅವರ ಅನಿರೀಕ್ಷಿತ ಸಹಾಯಹಸ್ತದ ರೂಪದಲ್ಲಿ ಒದಗಿಬಂದಿತು.

ಸ್ವಾಮೀಜಿಗೆ ಅವರು ಅಕಸ್ಮಾತ್ತಾಗಿ ಪರಿಚಿತರಾದರು. ಬಹುಶ್ರುತ ವಿದ್ವಾಂಸರೂ ಗೌರವಾನ್ವಿತರೂ ಆಗಿದ್ದ ಅವರ ಬಗ್ಗೆ ವಿಶ್ವಸಮ್ಮೇಳನದ ಆಯ್ಕೆ ಸಮಿತಿಯ ಅಧ್ಯಕ್ಷರಿಗೆ ತುಂಬಾ ಗೌರವವಿತ್ತು. ಪ್ರೊ. ರೈಟ್‌ರವರು ಅವರಿಗೆ ಬರೆದ ಪತ್ರದಲ್ಲಿ, "ನಮ್ಮ ಅತ್ಯುನ್ನತ ಮೇಧಾವಿ ಪ್ರೊಫೆಸರುಗಳೆಲ್ಲರನ್ನೂ ಒಟ್ಟುಗೂಡಿಸಿದರೂ, ಅವರೆಲ್ಲರನ್ನೂ ಮೀರಿಸುವ ವ್ಯಕ್ತಿ ಈ ಇಂಡಿಯಾದ ಸಾಧು" ಎಂದು ವಿವೇಕಾನಂದರ ಬಗ್ಗೆ ಬರೆದಿದ್ದರು. ಆಯ್ಕೆ ಸಮಿತಿಯ ಅಧ್ಯಕ್ಷರು, ಸ್ವಾಮೀಜಿಯನ್ನು ಭಾರತದ ಪ್ರತಿನಿಧಿಯೆಂದು ಕೊನೆಯ ಗಳಿಗೆಯಲ್ಲಿ ಒಪ್ಪಿಕೊಂಡರು. ಪ್ರೊ. ರೈಟ್‌ರವರ ಈ ಅವ್ಯಾಜವಾದ ಸೇವೆಯನ್ನು ಭಾರತೀಯರು ಕೃತಜ್ಞತೆಯಿಂದ ನೆನೆಸಿಕೊಳ್ಳಬೇಕು. ಆದರ್ಶಪ್ರಾಯವಾದ ಸೇವೆಗಳ ಸಾಲಿಗೆ ಇದೂ ಸೇರಿರುತ್ತದೆ.

ಸೋದರಿ ನಿವೇದಿತಾರಂತಹ ಕೆಲವು ಪಾಶ್ಚಾತ್ಯ ಶಿಷ್ಯರಿಗೆ ಸ್ಫೂರ್ತಿಯಿತ್ತು, ಅವರು ಸ್ವದೇಶವನ್ನು ಬಿಟ್ಟು ದೂರದ ಭಾರತಕ್ಕೆ ಬಂದು, ಇಲ್ಲೇ ನೆಲಸಿ ನಿಸ್ವಾರ್ಥ ಸೇವೆಯಲ್ಲಿ ತೊಡಗುವಂತೆ ಮಾಡಿದ್ದು ಸಾಮಾನ್ಯ ಸಂಗತಿಯಲ್ಲ. ಸರ್ವತ್ಯಾಗಕ್ಕೂ ಸಿದ್ಧರಾಗಿ ದೂರದ ಭಾರತದ ದೀನದಲಿತರ ಮತ್ತು ಮಹಿಳೆಯರ ಬದುಕನ್ನು ಉತ್ತಮಗೊಳಿಸುವಂತಹ ಸೇವಾಕಾರ್ಯಕ್ಕೆ ಹೊರಟುನಿಂತ ಮಾರ್ಗರೆಟ್ ನೊಬೆಲ್‌ರಿಗೆ (ಸೋದರಿ ನಿವೇದಿತಾ) "ಈ ಸೇವೆಯ ದಾರಿ ಸುಗಮವಾದ, ಹೂಚೆಲ್ಲಿದ ದಾರಿಯಲ್ಲ" ಎಂದು ಪತ್ರ ಬರೆದರು. ಆಕೆ ಎದುರಿಸಬೇಕಾಗಿ ಬರುವ ಕಷ್ಟಕೋಟಲೆ, ಅಡ್ಡಿ ಅತಂಕ, ದಾರುಣ ಹಾಗೂ ಹತಾಶೆಯ ಪರಿಸ್ಥಿತಿಗಳನ್ನು ಬಣ್ಣಿಸಿದರು. ಅದು ಉತ್ಪ್ರೇಕ್ಷೆಯಲ್ಲದ ವಾಸ್ತವತೆ ಎಂದು ಸ್ಪಷ್ಟಪಡಿಸಿದರು. ಸೇವಾಕ್ಷೇತ್ರ ಎಂಬುದು ಎಲ್ಲ ಸೌಕರ್ಯಗಳನ್ನೂ ಒಳಗೊಂಡು ಸಜ್ಜಾದ ರಂಗವಲ್ಲ. ಸೇವಾವ್ರತಿಗಳಾಗಿ, ನಿರಾವಲಂಬಿಗಳಾಗಿ, ಧೃತಿಗೆಡದೆ, ಹಿಮ್ಮೆಟ್ಟದೆ, ಕಡೆಗೆ ಉಪಕೃತರು ಕೃತಜ್ಞತೆಯ ಮಾತಿರಲಿ, ಪ್ರಬಲ ವಿರೋಧವನ್ನೊಡ್ಡಿದಾಗಲೂ ಎದೆಗುಂದದೆ ಸೇವೆ ಮಾಡಬೇಕಾಗುವುದೆಂದು ಎಚ್ಚರಿಸಿದರು. ಎಲ್ಲ ತ್ಯಾಗಕ್ಕೂ, ಅಪಪ್ರಚಾರದ ಆಘಾತಕ್ಕೂ ಸಿದ್ಧವಾಗಿರಬೇಕು. ಉಪಕಾರ ಮಾಡುವಾಗ ಸ್ವತಃ ತಾವೇ ಉಪಕೃತರು ಎಂಬ ಭಾವವಿರಬೇಕು. ಸ್ವಾಮೀಜಿಯ ಈ ಎಲ್ಲ ಮಾತುಗಳಿಂದ ನಿರುತ್ಸಾಹ ತಾಳದೆ, ಸೋದರಿ ನಿವೇದಿತಾ ಭಾರತಕ್ಕೆ ಬಂದರು. ಶ್ರೀಶಾರದಾಮಾತೆಯ ದರ್ಶನ ಮಾಡಿ

ಆಶೀರ್ವಾದ ಪಡೆದರು, ಕೂಡಲೆ ಕಾರ್ಯಪ್ರವೃತ್ತರಾದರು. ಆರ್ಥಿಕವಾಗಿ ಹಿಂದುಳಿದ, ಕೆಳಮಧ್ಯಮ ವರ್ಗದ ಮಹಿಳೆಯರಿಗೆ ಶಿಕ್ಷಣದ ಮೂಲಕ ಧೈರ್ಯ, ಆತ್ಮವಿಶ್ವಾಸಗಳನ್ನು ತುಂಬುವ ಕಾರ್ಯವನ್ನು ಕೈಗೊಂಡರು. ಸ್ವಾಮೀಜಿ ಎಚ್ಚರಿಕೆ ಕೊಟ್ಟಂತೆ, ನಾನಾ ಬಗೆಯ ಅಡ್ಡಿ ಅಡಚಣೆಗಳೂ ತೊಂದರೆಗಳೂ ಅವರಿಗೆ ಎದುರಾದವು. ಸೋದರಿ ನಿವೇದಿತಾ ಇವೆಲ್ಲವನ್ನೂ ಎದುರಿಸಿ ಸೇವೆಯನ್ನು ಮುಂದುವರಿಸಿದರು.

ಸೇವೆ ಆರಂಭವಾಗುವುದು ಕುಟುಂಬದಲ್ಲಿ, ಮೊದಲು ಮನೆಯಲ್ಲಿ ತಾಯಿತಂದೆಯರ ಸೇವೆಯಿಂದ. ಅದು ಜೀವನಪರ್ಯಂತ ಮಾಡಬೇಕಾದುದು. ಮಾತಾಪಿತೃಋಣ ಎಂದೆಂದಿಗೂ ತೀರಿಸಲಾಗದಂತಹುದು. ಅದು ಕೂಡ ಸಹಜವಾದ, ಪ್ರೀತಿ, ಮಮತೆಗಳು ತುಂಬಿದ ಮನದಿಂದ ಮಾಡುವ ಸೇವೆ. ಕಾಟಾಚಾರಕ್ಕೆ, ಜನರನ್ನು ಮೆಚ್ಚಿಸಲೆಂದು ಮಾಡುವ ಸೇವೆ ಅಲ್ಲ. ವೃದ್ಧಾಶ್ರಮಗಳಿಗೆ (ವೃದ್ಧಾಶ್ರಮಗಳೇ ಇಲ್ಲದ ಸಮಾಜ ಶ್ರೇಷ್ಠವಾದುದು) ಆಸ್ಪತ್ರೆಗಳಿಗೆ, ಬಡವರ ಗುಡಿಸಲುಗಳಿಗೆ ಹೋಗಿ ಸಾಂತ್ವನದ ಮಾತುಗಳನ್ನಾಡುವುದು, ಹಣ್ಣು ಆಹಾರ ಹಂಚಿ ಬರುವುದು – ಇವೆಲ್ಲವನ್ನೂ ಮನಃಪೂರ್ವಕವಾಗಿ ಪ್ರೀತಿಯಿಂದ ಮಾಡಿದರೆ ಒಳ್ಳೆಯ ಸೇವೆಯೆ. ಸಾರ್ವಜನಿಕ ಮನ್ನಣೆಗಾಗಿ, ಪ್ರಚಾರಕ್ಕಾಗಿ, ಪ್ರಸಿದ್ಧಿಗಾಗಿ ಮಾಡುವ ಸೇವೆ ಬೂಟಾಟಿಕೆಯದಾಗುತ್ತದೆ, ಆದರ್ಶವಾಗುವುದಿಲ್ಲ. ನಿಸ್ವಾರ್ಥವಾದ, ಪ್ರತಿಫಲಾಪೇಕ್ಷೆಯಿಲ್ಲದ ಸೇವೆಯು ಪೂಜೆಗೆ, ಆತ್ಮಸಾಧನೆಗೆ ಸಮನಾದುದು. ಸೇವೆಯೂ ಒಂದು ಬಗೆಯ ಅಧ್ಯಾತ್ಮಸಾಧನೆ ಎಂದು ಶ್ರೀರಾಮಕೃಷ್ಣರಿಂದ ನರೇಂದ್ರನಿಗೆ ತಿಳಿಯಿತು. ಸೇವೆಯ ಉದ್ದೇಶ ಮನಶ್ಶುದ್ಧಿ ಮತ್ತು ಅಹಂಕಾರ ನಿರಸನ ಎನ್ನುತ್ತಾರೆ ಶ್ರೀರಾಮಕೃಷ್ಣರು.

ಶ್ರೀರಾಮಕೃಷ್ಣರ ಜೀವನವು ಆಧ್ಯಾತ್ಮಿಕ ಸಾಧನಾನುಭವ, ಸಾಕ್ಷಾತ್ಕಾರ ಹಾಗೂ ದಿವ್ಯವಾದ ಮಾರ್ಗದರ್ಶಿ ಸಂದೇಶಗಳ ಪವಿತ್ರ ಗ್ರಂಥವೇ ಆಗಿದೆ. ಅದರ ಒಂದೊಂದು ಪುಟವನ್ನೂ, ಬೋಧನೆಯ ಸಾರ ಹಾಗೂ ಅಂತರಾರ್ಥವನ್ನೂ ನರೇಂದ್ರನ ನಿಶಿತಮತಿ ಬಹುಬೇಗ ಗ್ರಹಿಸಿತು, ಹೃದಯ ಸ್ಪಂದಿಸಿತು.

ಒಂದು ಸಲ ಭಕ್ತ – ಭಗವಂತ – ಭಾಗವತ ಅಥವಾ ಧಾರ್ಮಿಕ ಗ್ರಂಥ– ಈ ವಿಚಾರಗಳ ಬಗ್ಗೆ ಶ್ರೀರಾಮಕೃಷ್ಣರೊಡನೆ ನರೇಂದ್ರಾದಿ ಶಿಷ್ಯರು ಸಂಭಾಷಿಸುತ್ತಿದ್ದಾರೆ. "ಇಡೀ ಜಗತ್ತೇ ಭಗವಂತನದು. ಸಕಲ ಜೀವರಲ್ಲೂ ದಯೆ ತೋರಬೇಕು" ಎಂಬ ಮಾತು ಬಂದಾಗ ಶ್ರೀರಾಮಕೃಷ್ಣರು ಭಾವಸಮಾಧಿಗೇರಿದರು. ಸ್ವಲ್ಪ ಹೊತ್ತಿನ ನಂತರ ಸಹಜ ಸ್ಥಿತಿಗೆ ಬಂದಾಗ ಭಾವದಲ್ಲಿ ಹೇಳುತ್ತಾರೆ, "ಜೀವರಲ್ಲಿ ದಯೆ ತೋರಲು ನೀನು ಯಾರು? ದಯೆ ತೋರುವ ಶಕ್ತಿ ಇರುವುದು ಭಗವಂತನೊಬ್ಬನಲ್ಲಿ ಮಾತ್ರ. ಸಹಾಯ, ಪರೋಪಕಾರ ಎಂಬ ಮಾತೆಲ್ಲ ಅಹಂಕಾರದ್ದು. ಜೀವರಲ್ಲಿರುವ ಶಿವನನ್ನು ಕಂಡು 'ಜೀವಶಿವ ಸೇವೆ' ಎಂದು ಸೇವೆ ಮಾಡಬೇಕು."

"ಜೀವ–ಶಿವ, ಜೀವ–ಶಿವ" ಎಂದು ಹೇಳಿಕೊಳ್ಳುತ್ತಾ ಹೊರಬಂದ ನರೇಂದ್ರ, "ಅವರ ಮಾತಿನಲ್ಲಿ ಅದ್ಭುತವಾದ ಒಂದು ಹೊಸ ಬೆಳಕನ್ನು ನಾನು ಕಂಡೆ. ಭಕ್ತಿಯ ಆದರ್ಶ, ಭಕ್ತಿ – ಜ್ಞಾನಗಳ ಸುಂದರ ಸಮನ್ವಯ ಸೇವೆಯಲ್ಲಿ ಅಭಿವ್ಯಕ್ತವಾಗಬೇಕು ಎಂಬುದನ್ನು ಆಗ ನಾನರಿತೆ" ಎಂದು ಅವರು ತಮ್ಮ ಆಪ್ತಶಿಷ್ಯರಿಗೆ ಹೇಳಿದರು.

ಶ್ರೀರಾಮಕೃಷ್ಣರು ಎಲ್ಲರಲ್ಲೂ ಜಗನ್ಮಾತೆ ಮಹಾಕಾಳಿಯನ್ನೇ ಕಾಣುತ್ತಿದ್ದರು. ಅವರಿಗಾಗಲಿ, ಶ್ರೀಶಾರದಾಮಾತೆಯವರಿಗಾಗಲಿ, ಯಾರೂ ಪರಕೀಯರಲ್ಲ; ಎಲ್ಲರಲ್ಲೂ ಇರುವ ದೈವತ್ವದ ಸೇವೆಯೇ ಹೊರತು ಸಹಾಯ, ಪರೋಪಕಾರ ಅಲ್ಲ. ಸ್ವಾಮೀಜಿಯವರ ಮನಸ್ಸಿನಲ್ಲೂ ಇದ್ದ ಇದೇ ಭಾವವು, ರಾಮಕೃಷ್ಣರ ಮಾತಿನಿಂದ ದೃಢವಾಯಿತು.

ಇದು ಸೇವೆಯ ಪರಮೋತ್ಕೃಷ್ಟವಾದ ಆಧ್ಯಾತ್ಮಿಕ ಸ್ತರ. ಭಾರತದ ಲಕ್ಷಾಂತರ ಸಾಮಾನ್ಯ ಜನರ, ದೀನ–ದಲಿತರ, ಅಸ್ಪೃಶ್ಯರೆಂಬ ಶಾಪಕ್ಕೆ ಗುರಿಯಾಗಿ ನರಳುತ್ತಿರುವವರ ಮತ್ತು ಕಡೆಗಣಿಸಲ್ಪಟ್ಟ ಮಹಿಳೆಯರ ಕಷ್ಟಕಾರ್ಪಣ್ಯ, ನರಳಾಟಗಳು ಅವರು ಹಿಂದಿನ ಜನ್ಮಗಳಲ್ಲಿ ಮಾಡಿದ ಕೆಟ್ಟಕರ್ಮಗಳ ಫಲವೆಂದಾಗಲೀ, ಇದೆಲ್ಲ ಅವರವರ ವಿಧಿ, ಹಣೆಬರಹ, ಅನುಭವಿಸದೆ ಗತ್ಯಂತರವಿಲ್ಲ ಎಂದಾಗಲೀ ಹೇಳಿ ಜವಾಬ್ದಾರಿಯಿಂದ, ಕರ್ತವ್ಯಗಳಿಂದ ನುಣುಚಿಕೊಳ್ಳುವುದು ಸರ್ವಥಾ ಸರಿಯಲ್ಲ. ಅದೆಲ್ಲ ತಾಮಸ ಪ್ರವೃತ್ತಿ ಧರಿಸಿರುವ ವೇಷಗಳು. ಕರ್ಮಸಿದ್ಧಾಂತ ಅನುಕೂಲಸಿಂಧುವಾಗಬಾರದು. ಹೃದಯಹೀನರಾಗದೆ ಇತರರ ನೋವಿಗೆ ಸ್ಪಂದಿಸುವ ಸಂಸ್ಕಾರ ಉಳ್ಳವರಾಗಿ, ಪ್ರತಿಯೊಬ್ಬ ಸಹಜೀವಿಯ ಬಗ್ಗೆಯೂ ಪ್ರೀತಿ ಅಂತಃಕರಣ ಇರಿಸಿಕೊಳ್ಳುವುದೇ ಮನುಷ್ಯತ್ವ. ಆಗ ಎಲ್ಲರೂ ಸುಖವಾಗಿದ್ದಾಗಲೇ ತಾನೂ ಸುಖವಾಗಿರಲು ಸಾಧ್ಯ ಎಂಬ ಸತ್ಯದ ಅರಿವಾಗುತ್ತದೆ. ವೈಯಕ್ತಿಕ ಸುಖಸೌಲಭ್ಯಗಳನ್ನು, ಬೇಕು ಬೇಡಗಳನ್ನು ತ್ಯಾಗ ಮಾಡಿ ಸೇವೆಯಲ್ಲಿ ತೊಡಗುವ ಮನೋಧರ್ಮವನ್ನು ಬೆಳೆಸಿಕೊಳ್ಳುವ ಸೇವಾದರ್ಶಕ್ಕೆ ಸೋದರಿ ನಿವೇದಿತಾರಂತಹ ಆಪ್ತಶಿಷ್ಯರನ್ನು ಸ್ವಾಮೀಜಿ ಸಿದ್ಧಗೊಳಿಸಿದರು. ಸೇವೆಯ ಆದರ್ಶ ಅನುಷ್ಠಾನ ಸಾಧ್ಯವಾದುದು ಎಂಬುದನ್ನು ಸೋದರಿ ನಿವೇದಿತಾರಂತಹ ವ್ಯಕ್ತಿಗಳ ಜ್ವಲಂತ ಉದಾಹರಣೆಯಿಂದ ಲೋಕಕ್ಕೆ ತೋರಿಸಿಕೊಟ್ಟರು.

ಸ್ವಾಮೀಜಿಯ ಸೇವಾದರ್ಶದಿಂದ ಪ್ರೇರಿತರಾಗಿ ಅದಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟ ಇನ್ನೊಬ್ಬ ಸಾಧಕರೆಂದರೆ ಅವರ ಗುರುಭಾಯಿಗಳಾದ ಸ್ವಾಮಿ ಅಖಂಡಾನಂದರು. ಅವರಿಗೆ ಬರೆದ ಪತ್ರದಲ್ಲಿ ಸ್ವಾಮೀಜಿ ಹೀಗೆ ಹೇಳುತ್ತಾರೆ: "ನಮ್ಮ ದೇಶದಲ್ಲಿ ತಾತ್ಕಾಲಿಕವಾಗಿ ನಮಗೆ ಬೇಕಾದುದು ಪೌರುಷ ಮತ್ತು ದಯೆ... **ಸ ಪ್ರತ್ಯಕ್ಷ ಏವ ಸರ್ವೇಷಾಂ ಪ್ರೇಮರೂಪಃ** – ಅವನು ಎಲ್ಲ ಜೀವಿಗಳಲ್ಲಿಯೂ ಪ್ರೇಮಸ್ವರೂಪನಾಗಿ ಆವಿರ್ಭವಿಸಿದ್ದಾನೆ ಎಂದು ಹೇಳಬೇಕು... ದೇಶವೆಲ್ಲ ದಯೆ ಮತ್ತು ಪ್ರೇಮದ ಪ್ರತ್ಯಕ್ಷ ದೇವರನ್ನು ಆರಾಧಿಸಲಿ. ಕೆಲಸ, ಕೆಲಸ, ಕೆಲಸ. ನನಗೆ ಇನ್ನು ಏನೂ ಬೇಕಾಗಿಲ್ಲ... ಕೀರ್ತಿ ಯಾರಿಗೆ ಬೇಕು? ಅದರಿಂದ ಪಾರಾಗು. ಹಸಿದವರಿಗೆ ಒಂದು ತುತ್ತು ಅನ್ನವನ್ನು ಒದಗಿಸುವ ಪ್ರಯತ್ನದಲ್ಲಿ ಹೆಸರು ಮತ್ತು ಗೌರವ ಹೋದರೂ ಹೋಗಲಿ."

ಶ್ರೀರಾಮಕೃಷ್ಣ ಮಿಷನ್ ಹಾಗೂ ಸ್ವಾಮಿ ವಿವೇಕಾನಂದರಿಂದ ಸ್ಫೂರ್ತಿ ಪಡೆದ ಸಹಸ್ರಾರು ಭಕ್ತರು ಈಗಲೂ ನಾನಾ ಕಡೆ ಸದ್ದುಗದ್ದಲವಿಲ್ಲದೆ ದೀನದಲಿತರ ನೋವನ್ನು ತೊಡೆದುಹಾಕುವ, ಸಂತ್ರಸ್ತರ ಕಣ್ಣೀರನ್ನು ಒರೆಸುವ ಸೇವಾಕಾರ್ಯಗಳಲ್ಲಿ ನಿರತರಾಗಿದ್ದಾರೆ. ಸ್ವಾಮೀಜಿ ಜಗತ್ತಿನ ವೇದಿಕೆಯಿಂದ ಪ್ರಸಾರ ಮಾಡಿದ ಸೇವಾದರ್ಶ ಸನಾತನ ಹಿಂದೂಧರ್ಮದ ತಿರುಳು ಕೂಡ ಹೌದು, ವಿಶ್ವಮಾನವ ಧರ್ಮದ ಸಾರ ಕೂಡ ಹೌದು.



# ಇಂದಿನ ಆರ್ಥಿಕ ಸಮಸ್ಯೆಗಳಿಗೆ ವಿವೇಕಾನಂದರ ಪರಿಹಾರ

ಜಿ. ರಾಮಕೃಷ್ಣ

**ಸುಭದ್ರ ದೇಶದ ನಿರ್ಮಾಣಕ್ಕಾಗಿ ಜನಸಾಮಾನ್ಯರ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಉನ್ನತಿಗಳು ಅತ್ಯಂತ ಅವಶ್ಯ ಎಂದು ಸ್ವಾಮಿ ವಿವೇಕಾನಂದರು ಪ್ರತಿಪಾದಿಸಿದರು. ಹೀಗಾಗಿ ಇಂದಿನ ಭ್ರಷ್ಟಾಚಾರಯುಕ್ತ, ಶೋಷಿತ ಸಮಾಜಸ್ಥಿತಿಗೆ ಅವರ ಆಲೋಚನೆಗಳು ಸೂಕ್ತವಾದ ಪರಿಹಾರವನ್ನು, ತಮ್ಮದೇ ಆದ ವಿಭಿನ್ನ ರೀತಿಯಲ್ಲಿ ನೀಡಬಲ್ಲವು. ಇದನ್ನು ಸಾಂದರ್ಭಿಕ ಉದಾಹರಣೆಗಳೊಂದಿಗೆ, ಸಾಮಾಜಿಕ ಕಳಕಳಿಯ ಭಾಷಾಭಿವ್ಯಕ್ತಿಯ ಮೂಲಕ, ಅರ್ಥಪೂರ್ಣವಾಗಿ ವಿಶ್ಲೇಷಿಸಿರುವ ಮಾನ್ಯ ಲೇಖಕರು ನವಕರ್ನಾಟಕ ಪ್ರಕಾಶನದವರು ಹೊರತರುತ್ತಿರುವ 'ಹೊಸತು' ಮಾಸಪತ್ರಿಕೆಯ ಸಂಪಾದಕರು.**



ಶ್ರೀರಾಮಕೃಷ್ಣ ಪರಮಹಂಸರು ನದಿಯ ಬಳಿ ಕುಳಿತು ನಾಣ್ಯಗಳನ್ನು ನದಿಗೆ ಬಿಸುಡುತ್ತಿದ್ದರಂತೆ. ಹಣ ಮತ್ತು ಮಣ್ಣು ಸಮಾನವೆಂದು ಭಾವಿಸುತ್ತಿದ್ದರೆಂಬುದಕ್ಕೆ ಇದೊಂದು ರೂಪಕ. ಇರುವ ನಾಣ್ಯಗಳನ್ನೆಲ್ಲಾ ಎಲ್ಲರೂ ನದಿಯೊಳಕ್ಕೆ ಬಿಸುಡಲು ಆರಂಭಿಸಿದರೆ, ಯಾವುದೇ ಸಮಸ್ಯೆಗೆ ಪರಿಹಾರ ದೊರೆಯುವ ಬದಲು ಇನ್ನಷ್ಟು ಹೊಸ ಸಮಸ್ಯೆಗಳು ನಮ್ಮೆದುರು ಧುತ್ತೆಂದು ನಿಲ್ಲುತ್ತವೆ. ರಾಮಕೃಷ್ಣರಿಗೆ ಸಹ ಅದೊಂದು ದಿನನಿತ್ಯದ ಅಭ್ಯಾಸ ಅಥವಾ ಆಚರಣೆ ಆಗಿರಲಿಲ್ಲ. ಹಣವಿರುವುದೇ ನಮ್ಮೆಲ್ಲ ಸಂಕಟಗಳಿಗೆ ಕಾರಣವೆನ್ನುವುದು ಅಂತಿಮ ಸತ್ಯವೆಂದಾದರೆ ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ಅರಸಬೇಕಾಗುವುದಿಲ್ಲ.

ಸಮಸ್ಯೆಯು ವಾಸ್ತವವೆಂದು ಗಣನೆಗೆ ಬಂದಾಗ ಪರಿಹಾರವನ್ನು ಕಂಡುಕೊಳ್ಳುವ ಪ್ರಯತ್ನ ಮಾಡುವುದು ವ್ಯಾವಹಾರಿಕವಾದದ್ದು. ಇಂದಿನ ನಮ್ಮ ಆರ್ಥಿಕ ಸಮಸ್ಯೆಗಳಿಗೆ ವಿವೇಕಾನಂದರಿಂದ 'ಇದಮಿತ್ಥಂ' ಎಂಬಂತಹ ಪರಿಹಾರದ ಸೂಚನೆ ದೊರೆಯುವುದು ಅಸಂಭವ. ಮಾರ್ಕ್ಸ್, ಗಾಂಧಿ, ಅಂಬೇಡ್ಕರ್, ಲೋಹಿಯಾ, ಮುಂತಾದವರಿಂದ ದೊರೆಯಬಹುದೆಂಬುದು ಸಹ ಒಂದು ಮಿಥ್ಯೆಯೇ. ಮಾನವರ ಸನ್ನಿವೇಶವು ಬದಲಾದಂತೆ ನೂತನ ಸಮಸ್ಯೆಗಳ ಆವಿರ್ಭಾವವು ಅನಿವಾರ್ಯ. ಆಗ ಬದಲಾದ ಹಾದಿಗಳನ್ನು ಗುರುತಿಸಿ ಮುನ್ನಡೆಯುವ ಅಗತ್ಯವಿರುತ್ತದೆ. ಆದರೆ ವಿವೇಕಾನಂದರಂತಹ ಮಹಾನ್ ವ್ಯಕ್ತಿಗಳು ನಮಗೆ ಹಾದಿ ತೋರುವುದು ಬೇರೆ ರೀತಿಯಲ್ಲಿ. 'ಇಂಥ ಸಮಸ್ಯೆ ಎದುರಾದಾಗ ಹೀಗೆ ಮಾಡು' ಎಂದು ನಿಷ್ಕೃಷ್ಟವಾಗಿ ಅವರೇನೂ ಹೇಳಲಾರರು. ಉದಾಹರಣೆಗೆ ಡಾಲರ್‌ಗೆ ಪ್ರತಿಯಾಗಿ ರೂಪಾಯಿಯ ಬೆಲೆ ಕುಸಿಯುತ್ತಿದೆ, ಅದನ್ನು ತಡೆಗಟ್ಟಲು ಏನು ಮಾಡಬೇಕೆಂದು ಯಾರೂ ವಿವೇಕಾನಂದರ ಬಳಿ ಸಾರಿ ದುಃಖ ತೋಡಿಕೊಳ್ಳುವುದಿಲ್ಲ. ಸಮಗ್ರವಾಗಿ ಭಾರತ ದೇಶದ ಜನರ ಆಶಯ ಏನಾಗಿರಬೇಕೆಂಬ ಮೂಲಮಂತ್ರವನ್ನು ಮಾತ್ರ ಅವರು ಬೋಧಿಸಬಲ್ಲರು. ಯಾರಿಗಾಗಿ ಇಷ್ಟೆಲ್ಲಾ ಪ್ರಜ್ಞಾಪೂರ್ವಕವಾಗಿ ಮಧ್ಯಪ್ರವೇಶ ಎಂಬುದನ್ನವರು ನಿರ್ದೇಶಿಸುತ್ತಾರೆ; ಆ ದಿಕ್ಕಿನಲ್ಲಿ ಹೆಜ್ಜೆ ಹಾಕಲು ಕೆಲವು ಮೂಲಭೂತ ಸೂಚನೆಗಳನ್ನವರು ನೀಡುತ್ತಾರೆ. ಅದನ್ನು ಮನನ ಮಾಡುತ್ತಾ ವರ್ತಮಾನದ ಪರಿಸ್ಥಿತಿಗಳಿಗೆ ಸ್ಪಂದಿಸಿ ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳುವುದು ಇಂದಿನವರ ಜವಾಬ್ದಾರಿ.

ವಿವೇಕಾನಂದರ ಹೃದಯ ಯಾವುದಕ್ಕೆ ಮಿಡಿಯುತ್ತಿತ್ತು ಅಥವಾ ಅವರ ದೃಷ್ಟಿ ಎತ್ತ ವಾಲುತ್ತಿತ್ತು ಎಂಬುದನ್ನು ಗುರುತಿಸಿದರೆ ಅವರಿಂದ ಪರಿಹಾರ ಪಡೆಯಲು ಮೊದಲ ಹೆಜ್ಜೆ ಇಟ್ಟಂತಾಗುತ್ತದೆ. ಉದಾಹರಣೆಗೆ ಅವರೊಮ್ಮೆ ಹೀಗೆ ಉದ್ಗರಿಸಿದ್ದರು : "ನಮ್ಮ ಜನಾಂಗದ ಮಹಾಪಾತಕವೇ ಜನಸಾಮಾನ್ಯರನ್ನು ನಿರ್ಲಕ್ಷಿಸಿದ್ದು. ಇದೇ ನಮ್ಮ ಅವನತಿಗೆ ಮುಖ್ಯ ಕಾರಣ. ಜನಸಾಮಾನ್ಯರು ವಿದ್ಯಾವಂತರಾಗಿ ಅವರಿಗೆ ಊಟಕ್ಕೆ ಬಟ್ಟೆಗೆ ಸಾಕಷ್ಟು ಸಿಕ್ಕುವವರೆಗೆ ಯಾವ ರಾಜಕೀಯದಿಂದಲೂ ಏನೂ ಪ್ರಯೋಜನವಿಲ್ಲ. ಅವರು ನಮ್ಮ ವಿದ್ಯಾಭ್ಯಾಸಕ್ಕೆ ಕಂದಾಯ ಕೊಡುವವರು. ನಮ್ಮ ದೇವಸ್ಥಾನ ಕಟ್ಟುವವರು, ಅದಕ್ಕೆ

ಬದಲು ನಮ್ಮಿಂದ ಅವರಿಗೆ ದೊರಕುವುದು ನಿಂದೆ: ಅವರು ನಿಜವಾಗಿ ನಮ್ಮ ಗುಲಾಮರಾಗಿರುವರು. ನಾವು ಭರತಖಂಡವನ್ನು ಉದ್ಧಾರ ಮಾಡಬೇಕಾದರೆ ಅವರಿಗಾಗಿ ಕೆಲಸ ಮಾಡಬೇಕು."

ನಮ್ಮ ದೇಶದ ಪ್ರಸ್ತುತ ಆರ್ಥಿಕ ನೀತಿಗಳನ್ನು ಈ ನೆಲೆಯಲ್ಲಿ ನಿಂತು ವಿಶ್ಲೇಷಿಸಿಕೊಳ್ಳುವುದು ವಿವೇಕಾನಂದರಿಂದ ನಾವು ಪಡೆಯಬಹುದಾದ ಗಟ್ಟಿ ಪರಿಹಾರ. ಅವರು ಎಲ್ಲ ಕಡೆಗಳಿಂದ ಸೂಕ್ತವೆಂದು ಕಂಡುಬಂದ ಅಂಶಗಳನ್ನು ಸ್ವಾಗತಿಸಲು ಮತ್ತು ಮೈಗೂಡಿಸಿಕೊಳ್ಳಲು ಹಿಂದೇಟು ಹಾಕದಂಥವರು. ಆ ಅರ್ಥದಲ್ಲಿ ಅವರು ನಿಜಕ್ಕೂ ಒಬ್ಬ ಚಿಂತಕ ಮತ್ತು ಕ್ರಿಯಾಶೀಲ ವ್ಯಕ್ತಿ. ಅದೇ ಅವರಿಗೆ ಒಂದು ರೀತಿ ಮುಳುವಾಗಿದೆ, ಏಕೆಂದರೆ ತಮಗೆ ಬೇಕಾದ್ದನ್ನು ಸಮರ್ಥಿಸಿಕೊಳ್ಳಲು ಅವರ ತಥಾಕಥಿತ ಹಿಂಬಾಲಕರು ಕೆಲವು ಮಾತುಗಳನ್ನು ಆಯ್ದುಕೊಂಡು, ಮಿಕ್ಕವನ್ನು ಪುಸ್ತಕದಲ್ಲೇ ಉಳಿಯುವಂತೆ ಮಾಡಿಬಿಡಬಹುದು. ಇದು ವಿವೇಕಾನಂದರನ್ನು ಆಸ್ತಿಯಾಗಿ ಪರಿವರ್ತಿಸಿ ಅವರಿಂದ ನಮಗೆ ಬೇಕೆನಿಸಿದ ಸಾಮಗ್ರಿಯನ್ನು ಹೆಕ್ಕಿಕೊಳ್ಳುವ ಮಾರ್ಗ. ಇದು ಅವರಿಗೆ ಗೌರವವೋ ಅಥವಾ ಅವರ ಮೂಲ ಆಶಯಗಳ ಮರೆವೋ ಎಂಬುದನ್ನು ಮಥಿಸಿಕೊಳ್ಳಬೇಕು. ಅವರು ಕನ್ಯಾಕುಮಾರಿಗೆ ಹೋಗಿದ್ದಾಗ ಸಮುದ್ರದಲ್ಲಿ ಈಜಿ ಒಂದು ಬಂಡೆಯನ್ನೇರಿ ಕುಳಿತು ಮಾಡಿದ್ದೇನು? ಬಡತನದಿಂದ ಬೆಂದಿರುವ, ಪರರ ಆಕ್ರಮಣಕ್ಕೆ ತುತ್ತಾಗಿ ಶಿಥಿಲವಾಗಿರುವ ಭಾರತದ ಪದತಲದಲ್ಲಿ ಕುಳಿತು ಕಣ್ಣೀರು ಸುರಿಸಿದರು. ಭಾರತದ ಜನರ ಬಡತನ, ಪರಾವಲಂಬನೆ ಮತ್ತು ಶಾಸ್ತ್ರಾಂಧತೆ – ಇವು ಅವರನ್ನು ಅತೀವ ಬಾಧಿಸಿದ್ದವು. ಅವನ್ನು ಕಿತ್ತೆಸೆಯಬೇಕೆಂಬುದು ಅವರ ಅಂದಿನ ನಿರ್ಧಾರವಾಗಿತ್ತು. ಅವರ ಸ್ಮಾರಕವನ್ನು ಆ ಕಲ್ಲಿನ ಮೇಲೆ ನಿರ್ಮಿಸಲಾಗಿದೆ. ಅಲ್ಲಿಗೆ ಹೋಗಲು ದೋಣಿಯಲ್ಲಿ ಜಾಗ ಸಿಗದಿರುವುದೂ ಉಂಟು. ಆದರೆ ವಿವೇಕಾನಂದರ ಅಂತರ್ಗ್ರಹಿಕೆಯನ್ನು ತಲುಪಲು ನಮಗೆ ಮಾನಸಿಕವಾದ ಒಂದು ದೋಣಿ ಬೇಕೇಬೇಕು. ಅವರ ಸ್ಮಾರಕಕ್ಕೆ ಹೋಗಲಾಗದಿದ್ದರೂ ಚಿಂತೆಯಿಲ್ಲ. ಅವರ ಕಾಲದ ವಸ್ತುಸ್ಥಿತಿಯಲ್ಲಿ ಸಮವಾಯವಾಗಿದ್ದ ವಿರೋಧಾಭಾಸಗಳ ಮಹಾಪೂರ ಅವರನ್ನು ಬಾಧಿಸಿತು. ಅವನ್ನು ಅವರು ಎತ್ತಿ ಆಡಿದರು. ಆ ಅನುಭವದ ಸಾಕ್ಷಾತ್ಕಾರ ನಮಗಾದರೆ ಅದೇ ವಿವೇಕಾನಂದರು ನೀಡುವ ಪರಿಹಾರ.

ವಿವೇಕಾನಂದರು ಜನಿಸುವ ಮೂರು ವರ್ಷ ಮೊದಲು, ೧೮೫೯ ರಲ್ಲಿ ಕುಂದುಕೂರಿ ವೀರೇಶಲಿಂಗಂ ಭಾರತದ ಬಡತನದ ಚಿತ್ರ ಕಂಡು ರೋಸಿಹೋಗಿ ವಸಾಹತು ಸರ್ಕಾರಕ್ಕೆ ಹಿಡಿಶಾಪ ಹಾಕಿದ್ದರು. ಅದು ಅಂದಿನ ವಾತಾವರಣ. ಅದಾದ ಎರಡು ದಶಕಗಳ ತರುವಾಯದಲ್ಲಿ ಯುವಕ ನರೇಂದ್ರನಾಥ ಸಮಾಜವಾದದ ಕನಸು ಕಾಣುತ್ತಿದ್ದ. ರಾಜಾ ರಾಮ್‌ಮೋಹನ್ ರಾಯ್ ಇಂಗ್ಲೆಂಡಿನಲ್ಲಿ ಕಾಲ್ಪನಿಕ ಸಮಾಜವಾದದ ಒಬ್ಬ ವಕ್ತಾರನಾಗಿದ್ದ ರಾಬರ್ಟ್ ಓವೆನ್‌ನ ಮಗನನ್ನು ಭೇಟಿಯಾಗಿ ಬಂದಿದ್ದರು. ವಿವೇಕಾನಂದರು ಆ ಕಾಲ್ಪನಿಕ ಸಮಾಜವಾದದ ಎಲ್ಲೆಯನ್ನು ದಾಟಿ ವೈಜ್ಞಾನಿಕ ಸಮಾಜವಾದದತ್ತ ಕ್ರಮಿಸಲಿಲ್ಲ. ಆದರೆ ಅವರಿನ್ನೂ ಶಾಲೆಯಲ್ಲಿ ಅಭ್ಯಾಸ ಮಾಡುತ್ತಿದ್ದಾಗ ೧೮೮೦ ರಲ್ಲಿ ಕೊಲ್ಕತಾ ವಿಶ್ವವಿದ್ಯಾಲಯದ ಎಂ.ಎ. (ಅರ್ಥಶಾಸ್ತ್ರ) ಪರೀಕ್ಷೆಯ ವಿದ್ಯಾರ್ಥಿಗಳಿಗೆ ಒಂದು ಪ್ರಶ್ನೆ ಹೀಗಿತ್ತು. "ಸಾಮಾನ್ಯವಾದ ಎಂದರೇನು? ಫೂರ್ಯೆ ಮತ್ತು ಸೇಂಟ್ ಸಿಮೋನ್ ಅದರ ಪರವಾಗಿ ಮಂಡಿಸಿದ ಕಾರ್ಯಕ್ರಮಗಳನ್ನು ವಿವರಿಸಿ." ಸೂತ್ರಬದ್ಧವಾಗಿ ಅಲ್ಲದಿದ್ದರೂ ವಿವೇಕಾನಂದರು ಅಂಥದೊಂದು ಸಂರಚನೆಯನ್ನು ಕಲ್ಪಿಸಿಕೊಳ್ಳುತ್ತಿದ್ದುದು ಅವರ ಬರಹಗಳಲ್ಲಿ ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಕಾಲ್ಪನಿಕ ಸಮಾಜವಾದದ ಒಂದು ಲಕ್ಷಣ, ಹಳೆಯ ಉತ್ಪಾದನಾ ಸಾಧನಗಳನ್ನು, ವಿನಿಮಯ ವಿಧಾನಗಳನ್ನು ಹಿಂದಿನಂತೆಯೇ ಉಳಿಸಿಕೊಳ್ಳುವುದು, ಅಂದರೆ, ಹಳೆಯ ಆಸ್ತಿ ಸಂಬಂಧಗಳು ಪಲ್ಲಟವಾಗಬಾರದು. ಹಾಗಿದ್ದಾಗ ಹಳೆಯ ಸಾಮಾಜಿಕ ಸಂಬಂಧಗಳು ಗುಣಾತ್ಮಕವಾಗಿ ಭಿನ್ನವಾಗುವುದಿಲ್ಲ. ಹಳೆಯ ಸಾಮಾಜಿಕ ಸಂಬಂಧಗಳ ಅಡಿಪಾಯವನ್ನು ಹಾಗೇ ಉಳಿಸಿಕೊಂಡು, ಅದರ ಮೇಲೆ ಆಧುನಿಕ ಉತ್ಪಾದನಾ ಸಾಧನಗಳನ್ನು ಮತ್ತು ವಿನಿಮಯ ವಿಧಾನವನ್ನು ಹೇರಹೊರಡುವುದು ಅದರ ಪದ್ಧತಿ. ಎರಡೂ ಸರಿಯಾಗಿ ಹೊಂದಿಕೊಳ್ಳದೆ ನಿರೀಕ್ಷಿತ ಬದಲಾವಣೆಯು ಕೇವಲ ಚಿಂತನೆಯ ಹಂತದಲ್ಲೇ ಉಳಿದುಬಿಡುತ್ತದೆ. ಆ ಹಿನ್ನೆಲೆಯಲ್ಲಿ ಸಾಮಾಜಿಕ, ಆರ್ಥಿಕ ಸಂಬಂಧಗಳ ವಿಶ್ಲೇಷಣೆಯಲ್ಲಿ ತೊಡಕು ಕಾಣಿಸಿಕೊಳ್ಳುವುದು ಸಹಜ. ಉದ್ಯೋಗಗಳಲ್ಲಿ ನಿರತರಾದ ಜನ ಸರಕು ಉತ್ಪಾದನೆ ಮಾಡುತ್ತಿದ್ದಾರೆ, ಕಚ್ಚಾ ಸಾಮಗ್ರಿಗಳಿಗೆ ಮೌಲ್ಯವರ್ಧನೆ ಜಾರಿಯಲ್ಲಿದೆ. ಆದರೆ ಉತ್ಪಾದಕರಲ್ಲಿ ಬಹುಜನ ಅನಕ್ಷರತೆ, ಹಸಿವು ಮತ್ತು ಕಾಯಿಲೆಗಳಿಗೆ ತುತ್ತಾಗಿದ್ದಾರೆ. ಇದೇಕೆ ಹೀಗೆ ? ವಿವೇಕಾನಂದರನ್ನು ತೀವ್ರವಾಗಿ ವಿಹ್ವಲರನ್ನಾಗಿಸಿದ ಪ್ರಶ್ನೆ ಇದು.

ಇದಕ್ಕೆ ಸಾಂಪ್ರದಾಯಿಕ ಉತ್ತರ 'ಕರ್ಮ' ಅಥವಾ 'ಹಣೆಬರಹ' ಎಂಬುದು. ವಿವೇಕಾನಂದರೂ ಅದನ್ನು ಸ್ವೀಕರಿಸುತ್ತಾರೆ. ಅವರ ಮಾತುಗಳಿವು: "ವೇದಾಂತಿಗಳಾಗಿ ನಾವು ನಂಬುವುದೇನೆಂದರೆ, ಮೊದಲಿಗೆ ನಮಗೆ ನಾವು ಬಾಧೆ ತಂದುಕೊಳ್ಳದಿದ್ದರೆ ಪ್ರಪಂಚದಲ್ಲಿ ನಮಗೆ ಬಾಧೆಯುಂಟುಮಾಡುವಂತಹ ಯಾವ ಪ್ರಬಲ ಶಕ್ತಿಯೂ ಇರಲಾರದು. ಆದ್ದರಿಂದ ಬೇರೆಯವರನ್ನು ದೂಷಿಸುವುದು ಬೇಡ, ನಮ್ಮ ಕರ್ಮವನ್ನು ಮಾತ್ರ ದೂಷಿಸೋಣ." ಈ ಕರ್ಮಸಿದ್ಧಾಂತವನ್ನು ಪ್ರತಿಪಾದಿಸುವವರ ಸಾಮಾನ್ಯ ದೃಷ್ಟಿಗೆ ಬದಲಾಗಿ ವಿವೇಕಾನಂದರು, ಭಾರತದ ಜನರನ್ನು ಕರ್ಮವು ಹೀಗೆ ಬಾಧಿಸಲು ಅವರೆಸಗಿರುವ ತಪ್ಪಾದರೂ ಏನು ಎಂದು ಕೇಳಿಕೊಳ್ಳುತ್ತಾರೆ. ಅವರಿಗೆ ದಟ್ಟವಾಗಿ ಕಾಣುವ ತಪ್ಪುಗಳು ಐದು: (ಅ) ಮತಧರ್ಮವನ್ನು ವಿಕೃತಗೊಳಿಸಿರುವುದು. (ಆ) ಜನತೆಯ ಮೇಲೆ ದೌರ್ಜನ್ಯವೆಸಗಿರುವುದು. (ಇ) ವಿದ್ಯಾಭ್ಯಾಸವನ್ನು ಸೂಕ್ತವಾಗಿ ನೀಡದಿರುವುದು. (ಈ) ಮಹಿಳೆಯರ ಪಾತ್ರವನ್ನು ಅವಗಣನೆಗೆ ಗುರಿಮಾಡಿರುವುದು. (ಉ) ದೈಹಿಕ ಮತ್ತು ಆಧ್ಯಾತ್ಮಿಕ ಬಲಹೀನತೆ ಮತ್ತು ಜಡತನ. ವಿವೇಕಾನಂದರು ವ್ಯಕ್ತಿಮಾತ್ರಕ್ಕೆ ಸೀಮಿತಗೊಳಿಸಿ, ಕರ್ಮಫಲದ ವ್ಯಾಖ್ಯಾನ ಮಾಡುವುದಿಲ್ಲ; ಅವರು ಇಡೀ ದೇಶದ 'ಹಣೆಬರಹದ' ಕಾರಣ ಹುಡುಕುತ್ತಿದ್ದಾರೆ. ಆ ಕಾರಣಗಳು ಅಂದು ಎಷ್ಟು ಪ್ರಸ್ತುತವಾಗಿದ್ದವೋ ಅಷ್ಟೇ ಇಂದೂ ಪ್ರಸ್ತುತವಾಗಿವೆ. ಆ ಐದು ಕಾರಣಗಳಿಗೂ ಯುಕ್ತವಾದ ನಿದರ್ಶನಗಳನ್ನು ನೀಡುವ ಆವಶ್ಯಕತೆ ಇಲ್ಲ. ಕಣ್ಣು ಮತ್ತು ಮನಸ್ಸು ಸ್ವಚ್ಛವಾಗಿರುವವರಿಗೆಲ್ಲಾ